O.S.No.329/2015
DW -2

ದಿನಾಂಕ 04/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಸ್.ಆರ್.ಆರ್ ವಾದಿ ಪರ ವಕೀಲರಿಂದ**

ನಾನು 2 ನೇ ಪ್ರತಿವಾದಿ ತಂದೆಯನ್ನು ನೋಡಿರುತ್ತೇನೆ. ಗಂಗಪ್ಪನಿಗೆ ಮಲ್ಲಿಕಾರ್ಜುನ , ನಂಜಪ್ಪ ಮತ್ತು ಚಂದ್ರಶೇಖರ್ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ನಾನು ಮಲ್ಲಿಕಾರ್ಜುನ ಇವರನ್ನು ನೋಡಿರುವುದಿಲ್ಲ. ಗಂಗಪ್ಪನಿಗೆ 3 ಜನ ಮಕ್ಕಳು ಎಂದು ಯಾರು ಹೇಳಿದರು ಎಂದರೆ ಸಾಕ್ಷಿ ಹುಡಗಿದ್ದಾಗ ನೋಡಿರುತ್ತೇನೆಂದು ಉತ್ತರಿಸಿರುತ್ತಾರೆ. ಮಲ್ಲಿಕಾರ್ಜುನ ರವರು ನಮ್ಮ ಊರಿನಲ್ಲಿ ಶಿಕ್ಷಣ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ರವರು ಬದುಕಿದ್ದ ಕಾಲಕ್ಕೆ ಅವರ ಮೂರು ಜನ ಮಕ್ಕಳು ಮಲ್ಲಿಕಾರ್ಜುನ , ನಂಜಪ್ಪ ಮತ್ತು ಚಂದ್ರಶೇಖರ್ ಮತ್ತು ಅವರ ಹೆಂಡತಿ ಒಟ್ಟಿಗೆ ವಾಸ ಇದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಮಲ್ಲಿಕಾರ್ಜುನ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಮಲ್ಲಿಕಾರ್ಜುನ ಇವರು 10-12 ವರ್ಷಗಳಿಂದ ಹಿಂದೂಪುರದಲ್ಲಿ ವಾಸ ಇರುತ್ತಾನೆ. ನಾನು ಹಿಂದೂಪುರದಲ್ಲಿ ಮಲ್ಲಿಕಾರ್ಜುನ ಇವರನ್ನು ನೋಡಿರುವುದಿಲ್ಲ. ಮಲ್ಲಿಕಾರ್ಜುನ ಇತನು ಹುಡಗನಿದ್ದಾಗಲೇ ಹಿಂದೂಪುರಕ್ಕೆ ಹೋಗಿರುತ್ತಾನೆ, ಮಲ್ಲಿಕಾರ್ಜುನ ಇತು ಹಿಂದೂಪುರದಲ್ಲಿ ಮದುವೆ ಆಗಿರುತ್ತಾನೆ. ಮದುವೆಯಾದ ನಂತರ ಮಲ್ಲಿಕಾರ್ಜುನ ಮತ್ತ ಆತನ ಹೆಂಡತಿ ಹಿಂದೂಪುರದಲ್ಲಿ ಹೊಟೇಲ್ ಇಟ್ಟುಕೊಂಡಿದ್ದರು ಎಂದರೆ ಸರಿ. ಅಲ್ಲಿಯವರೆಗೂ ಮಲ್ಲಿಕಾರ್ಜುನ ಸಿದ್ದನಹಳ್ಳಿಯಲ್ಲಿ ವಾಸ ಇದ್ದನು ಎಂದರೆ ಸರಿಯಲ್ಲ.

2. ಗಂಗಪ್ಪ ರವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ವ್ಯವಸಾಯದಿಂದ ಬಂದ ಹಣದಿಂದ ಮನೆ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೋಟೆಲ್ ಇಟ್ಟುಕೊಂಡಿದ್ದರು ಎಂದು ಉತ್ತರಿಸಿರುತ್ತಾರೆ. ಗಂಗಪ್ಪ ರವರ ಹೊಟೆಲ್‌ಗೆ ಹೆಸರು ಇರಲಿಲ್ಲ ಸದರಿ ಹೊಟೆಲ್ ಸಿದ್ದನಹಳ್ಳಿಯಲ್ಲಿ ಇತ್ತು. ಗಂಗಪ್ಪ ರವರು ಬದುಕಿದಕ್ಕ ಕಾಲಕ್ಕೆ ಊರಿನಲ್ಲಿ 20 ಮನೆಗಳು ಇದ್ದವು ಎಂದರೆ ಸಾಕ್ಷಿ 100 ಮನಗೆಳು ಇದ್ದವು ಎಂದು ಉತ್ತರಿಸಿರುತ್ತಾರೆ. ಸದರಿ ಊರಿನಲ್ಲಿ ಯಾವುದೇ ಹೊಟೆಲ್ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು

ನೋಡಿರುತ್ತೇನೆ. ಸರ್ವೆ ನಂಬರ್ ನನಗೆ ಗೊತ್ತಾಗುವುದಿಲ್ಲ. ಗಂಗಪ್ಪನಿಗೆ ಪಿತ್ರಾರ್ಜಿತವಾಗಿ 2 ಎಕರೆ 2 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ 27 ವರೆ ಗುಂಟೆ ಗಂಗಪ್ಪ ಉಳುಮೆ ಮಾಡುತ್ತಿದ್ದ ಎಂದರೆ ಸರಿ.

3. ದಾವಾ ಆಸ್ತಿ 2 ರಿಂದ 5 ಗಂಗಪ್ಪನಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ವ್ಯವಸಾಯದಿಂದ ಬಂದ ಆದಾಯದಿಂದ ಕೊಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿ ವ್ಯಾಪಾರದಿಂದ ಬಂದ ಆದಾಯದಿಂದ ಕೊಂಡಿರುತ್ತಾರೆಂದು ಉತ್ತರಿಸಿರುತ್ತಾರೆ. ಗಂಗಪ್ಪ ರವರು ಹುಣಸೆ ಹಣ್ಣು, ಕಡಲೆಕಾಯಿ, ಅಡಿಕೆ ವ್ಯಾಪಾರ ಮಾಡುತ್ತಿದ್ದರು. ಯಾರ ಕಡೆಯಿಂದ ಎಷ್ಟು ಕ್ವಿಂಟಾಲ್ ಹುಣಸೆ ಹಣ್ಣು, ಕಡಲೆಕಾಯಿ ಮತ್ತು ಅಡಿಕೆ ತೆಗೆದುಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಗಂಗಣ್ಣ ಬದುಕಿದ್ದ ಕಾಲಕ್ಕೆ ಒಂದೇ ಮನೆಯಲ್ಲಿ ವಾಸ ಇದ್ದು ದಾವಾ ಆಸ್ತಿಗಳನ್ನು ಜಂಟಿ ಸ್ವಾಧೀನಾನುಭದಲ್ಲಿದ್ದರು ಎಂದರೆ ಸರಿಯಲ್ಲ. ಮಲ್ಲಿಕಾರ್ಜುನ ಸರಿ ಇಲ್ಲ ಎಂಬ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿದ್ದು ಸದರಿ ವಿಚಾರವನ್ನು ನಾನೇ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಮಾರು ಭಾರಿ ಗಲಾಟೆ ಆಗಿರುತ್ತದೆ ಎಂಬುದನ್ನು ಹೇಳಿರುವುದಿಲ್ಲ. ಸದರಿ ವಿಚಾರವನ್ನು ನನಗೆ ಯಾರು ಹೇಳಿರುವುದಿಲ್ಲ ಮತ್ತು ನಾನು ನೋಡಿರುವುದಿಲ್ಲ ಎಂದರೆ ಸರಿ. ಮಲ್ಲಿಕಾರ್ಜುನ ಯಾವ ಕಾರಣಕ್ಕಾಗಿ ಹಿಂದೂಪುರಕ್ಕೆ ಹೋಗಿರುತ್ತಾನೆಂದು ನನಗೆ ಗೊತ್ತಿರುವುದಿಲ್ಲ. ಗಂಗಪ್ಪನ ಮೂರು ಜನ ಮಕ್ಕಳ ನಡುವೆ ವಿಭಾಗ ಆಗಿರುವುದಿಲ್ಲ ಎದರೆ ಸರಿ. ಗಂಗಪ್ಪ ಬೇರೆ ಹೋದ ಕಾಲಕ್ಕೆ ದಿನ್ನೆ ಜಮೀನು ಮಾತ್ರ ಮುಕ್ಕಾಲು ಎಕರೆ ಭಾಗ ಬಂದಿರುತ್ತದೆ. ದಾವಾ ಆಸ್ತಿಗಳಲ್ಲಿ ಗಂಗಪ್ಪನ ಮೂರು ಜನ ಮಕ್ಕಳಿಗೂ ಸಮನಾದ ಭಾಗ ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ